


# ಸಚಿನ್ ಆರಾಧಕನ ಹೊಸ ಅಧ್ಯಾಯ

**ರಚಿನ್ ರವೀಂದ್ರ 23ರ ಚಿಕ್ಕಪ್ರಾಯದಲ್ಲಿ ವಿಶ್ವಕಪ್ ಒಂದರ ಮೊದಲ ಪಂದ್ಯದಲ್ಲಿಯೇ ಪ್ರಬಲ ಇಂಗ್ಲೆಂಡ್ ಎದುರು ಭಾರತದ ನೆಲದಲ್ಲಿ ಔಟಾಗದೆ ಶತಕ ಗಳಿಸಿದ್ದಾರೆ. ಎಡಗೈ ಸ್ಪಿನ್ ಬೌಲಿಂಗ್ ಕೂಡ ಮಾಡಬಲ್ಲ ಇವರನ್ನು 'ಸೂಪರ್‌ಸ್ಟಾರ್ ಇನ್ ಮೇಕಿಂಗ್' ಎಂದು ಬಣ್ಣಿಸಲು ಕಾರಣಗಳು ಸಿಕ್ಕಿವೆ.**

■ ವಿಶಾಖ ಎನ್.

**Rahul Dravid** ಎಂಬ ಹೆಸರಿನಿಂದ **Ra** ತೆಗೆದುಕೊಂಡು, **Sachin Tendulkar** ಹೆಸರಿನಿಂದ **chin** ತೆಗೆದುಕೊಂಡು ಸೇರಿಸಿದರೆ **Rachin** ಆಗುತ್ತದೆ. ಅದನ್ನೇ ತಮ್ಮ ಮಗನಿಗೆ ನಾಮಕರಣ ಮಾಡಿದವರು ರವಿ ಕೃಷ್ಣಮೂರ್ತಿ. ಆ ಹೆಸರಿನ ಪಕ್ಕ **Ravindra** ಎನ್ನುವುದನ್ನೂ ಸೇರಿಸಿ **Rachin Ravindra** ಎಂದಾಗಿಸಿದರು. ಈ ಸಲದ ವಿಶ್ವಕಪ್ ಕ್ರಿಕೆಟ್‌ನ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್‌ನ ಘಟಾನುಘಟಿ ಬೌಲರ್‌ಗಳ ಬೆವರಿಳಿಸುವಂತೆ ಆಡಿದ ರಚಿನ್ ರವೀಂದ್ರ ಸದ್ಯದ ಸದ್ದು.

ರವಿ ಕೃಷ್ಣಮೂರ್ತಿ ಸಾಫ್ಟ್‌ವೇರ್ ಆರ್ಕಿಟೆಕ್ಟ್. ಒಂದು ಕಾಲದಲ್ಲಿ ಬೆಂಗಳೂರಿನಲ್ಲಿ ಕ್ಲಬ್ ಕ್ರಿಕೆಟ್ ಆಡುತ್ತಿದ್ದರು. ಈಗ ವೆಲ್ಲಿಂಗ್ಟನ್‌ನಲ್ಲಿ ನೆಲೆಸಿದ್ದಾರೆ. ಅವರ ಪುತ್ರ ಅದೇ ಕಾರಣಕ್ಕೆ ನ್ಯೂಜಿಲೆಂಡ್ ದೇಶದ ಪರವಾಗಿ ಕ್ರಿಕೆಟ್ ಆಡುತ್ತಿರುವುದು. ದೇಸಿ ಕ್ರಿಕೆಟ್‌ನಲ್ಲಿ ಈ ಎಡಗೈ ಆಟಗಾರನ ಸ್ಥಿರ ಪ್ರದರ್ಶನವೇ ಅಂತರರಾಷ್ಟ್ರೀಯ ಕ್ರಿಕೆಟ್ ಪ್ರವೇಶವನ್ನು ಬೇಗ ಖಾತರಿಪಡಿಸಿದ್ದು.

ನಾಲ್ಕು ವರ್ಷಗಳ ಹಿಂದೆ ವಿಶ್ವಕಪ್ ಫೈನಲ್ ಪಂದ್ಯ ನಡೆದಾಗ ಇದೇ ರಚಿನ್, ಟೀವಿ ಎದುರು ಕುಳಿತಿದ್ದರು. ಇಂಗ್ಲೆಂಡ್ ಎದುರು ಸೂಪರ್‌ಓವರ್‌ನಲ್ಲಿ ನ್ಯೂಜಿಲೆಂಡ್ ಸೋತಾಗ 'ಛೆ' ಎಂದುಕೊಂಡವರಲ್ಲಿ ಇವರೂ ಒಬ್ಬರು. ಈ ಸಲ ಮೊದಲ ಪಂದ್ಯದಲ್ಲಿಯೇ ಮೂರನೇ ಬ್ಯಾಟ್ಸ್‌ಮನ್ ಆಗಿ ಅವರು ಆಡಲು ಇಳಿದಾಗ ಖುದ್ದು ಅವರಿಗೂ ಅಚ್ಚರಿ. ಯಾಕೆಂದರೆ, ಅಂತರರಾಷ್ಟ್ರೀಯ ಏಕದಿನ ಪಂದ್ಯವೊಂದರಲ್ಲಿ ಈ ಕ್ರಮಾಂಕದಲ್ಲಿ ಅವರಿಗೆ ಆಡುವ ಅವಕಾಶ ಸಿಕ್ಕಿದ್ದು ಇದೇ ಮೊದಲು. ದೇಸಿ ಕ್ರಿಕೆಟ್‌ನಲ್ಲಿ ಆರಂಭಿಕ ಆಟಗಾರನಾಗಿ ಪಳಗಿದ್ದರಿಂದ ಅವರು ಲೀಲಾಜಾಲವಾಗಿ ಇಂಗ್ಲೆಂಡ್ ಬೌಲರ್‌ಗಳನ್ನು ಎದುರಿಸಿದರು. ಅದರಲ್ಲೂ ಪವರ್ ಪ್ಲೇನಲ್ಲಿ ಅವರು ಆಡಿದ ಆಕ್ರಮಣಕಾರಿ ಆಟ ಕಂಡು ಇಂಗ್ಲೆಂಡ್‌ನ ಕ್ರಿಸ್ ವೋಕ್ಸ್, ಸ್ಯಾಮ್ ಕರನ್, ಮಾರ್ಕ್ ವುಡ್ ತರಹದ ಪರಿಣತ ವೇಗಿಗಳೂ ಕಂಗಾಲಾದರು. 96 ಎಸೆತಗಳಲ್ಲಿ ಔಟಾಗದೆ 123 ಗಳಿಸಿದ್ದು ರಚಿನ್ ಸಾಧನೆ. 11 ಬೌಂಡರಿಗಳು, ಆರು ಸಿಕ್ಸರ್‌ಗಳನ್ನು ಒಳಗೊಂಡಿದ್ದ ಅಪರೂಪದ ಇನಿಂಗ್ಸ್ ಅದು. ಬ್ಯಾಟಿಂಗ್‌ನ ಈ ಪ್ರದರ್ಶನಕ್ಕಾಗಿ ಅವರಿಗೆ ಪಂದ್ಯ ಪುರುಷೋತ್ತಮ ಪ್ರಶಸ್ತಿಯೇನೊ ಸಿಕ್ಕಿತು. ಆದರೆ, ಅವರ ಎಡಗೈ ಸ್ಪಿನ್ ಮೊದಲ ಪಂದ್ಯದಲ್ಲಿ ಅಷ್ಟೇನೂ ಗಮನ ಸೆಳೆಯುವಂತೆ ಇರಲಿಲ್ಲ. 10 ಓವರ್‌ಗಳಲ್ಲಿ 76 ರನ್ ನೀಡಿ ಅವರು ಒಂದು ವಿಕೆಟ್ ಮಾತ್ರ ಪಡೆದುಕೊಂಡರು.

ರಚಿನ್ ಕವರ್ ಡ್ರೈವ್ ನೋಡಿದರೆ ಅವರು ಸಚಿನ್ ಅವರನ್ನು ಯಾಕೆ ಆರಾಧಿಸುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಫ್ಲಿಕ್ ಮಾಡುವ ಪರಿಯಲ್ಲಿ ಅವರು ಇಷ್ಟಪಡುವ ಬ್ರಯಾನ್ ಲಾರಾ ಪ್ರಭಾವವನ್ನೂ ನೋಡಬಹುದು. ಪುಲ್–ಕಟ್ ಮಾಡುವಾಗ ಎದ್ದುಕಾಣುವ ಆತ್ಮವಿಶ್ವಾಸವನ್ನು ಕುಮಾರ ಸಂಗಕ್ಕಾರ ಅವರಿಂದ ಎರವಲು ಪಡೆದುಕೊಂಡಂತೆ ಭಾಸವಾಗುತ್ತದೆ. ಸಚಿನ್, ಲಾರಾ, ಸಂಗಕ್ಕಾರ – ಈ ಮೂವರೆಂದರೆ ರಚಿನ್‌ಗೆ ಅಚ್ಚುಮೆಚ್ಚು. ಎಡಗೈ ಆಟಗಾರ ಆಗಿರುವುದರಿಂದ ಲಾರಾ, ಸಂಗಕ್ಕಾರ ಆಟದ ವಿಡಿಯೊಗಳನ್ನು ಪದೇಪದೇ ನೋಡಿ ಇವರು ಎಷ್ಟೋ ವರಸೆಗಳನ್ನು ಅನುಕರಿಸಿದ್ದೂ ಇದೆ. ಆದರೀಗ ಅವರಿಗೆ ತಮ್ಮ ಆಟದ ಮೇಲೆ ಅಚಲವಾದ ನಂಬಿಕೆ ಬಂದಿದೆ.

2000ನೇ ಇಸವಿಯ ನವೆಂಬರ್‌ನಲ್ಲಿ ವೆಸ್ಟ್‌ಇಂಡೀಸ್ ತಂಡವು ನ್ಯೂಜಿಲೆಂಡ್‌ಗೆ ಪ್ರವಾಸ ಬಂದಾಗ ಅಭ್ಯಾಸ ಪಂದ್ಯದಲ್ಲಿ ಆಡುವ ತಂಡದಲ್ಲಿ ರಚಿನ್ ಇದ್ದರು. ಆ ಪಂದ್ಯದಲ್ಲಿ ಅವರು ಸಿಕ್ಕ ಅವಕಾಶವನ್ನು ಹಣ್ಣಾಗಿಸಿ, 112 ರನ್ ಗಳಿಸಿದರು. 2021ರ ಏಪ್ರಿಲ್‌ನಲ್ಲಿ ಇಂಗ್ಲೆಂಡ್ ಎದುರಿನ ಸರಣಿಗೆ ಆಯ್ಕೆಯಾದ ಟೆಸ್ಟ್ ತಂಡದಲ್ಲಿ ರಚಿನ್ ಹೆಸರು ಇತ್ತು. 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿ 2016 ಹಾಗೂ 2018ರಲ್ಲಿ ನಡೆದಾಗ ನ್ಯೂಜಿಲೆಂಡ್ ತಂಡದಲ್ಲಿಯೂ ಅವರಿದ್ದರು. 'ಲಿಸ್ಟ್ ಎ' ಪಂದ್ಯಗಳಲ್ಲಿ ಆಡಲು ಶುರುಮಾಡಿದ್ದು 2018ರಲ್ಲಿ. ದೇಸಿ ಕ್ರಿಕೆಟ್‌ನಲ್ಲಿ ವೆಲ್ಲಿಂಗ್ಟನ್ ತಂಡದ ಪ್ರಮುಖ ಆಟಗಾರನೂ ಆಗಿ ಬೆಳೆದದ್ದು ಅದೇ ವರ್ಷ. ಈ ವರ್ಷ ಮಾರ್ಚ್‌ನಲ್ಲಿ ಶ್ರೀಲಂಕಾ ಎದುರಿನ ಏಕದಿನ ಪಂದ್ಯದಲ್ಲಿ ಆಡುವ ಮೂಲಕ ಈ ಮಾದರಿಯ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಅವರ ಪದಾರ್ಪಣೆ ಆಗಿತ್ತು. ಇದೀಗ ಅಲ್ಪಾವಧಿಯಲ್ಲೇ ಅವರು ಮೇಲಿನ ಕ್ರಮಾಂಕದಲ್ಲಿ ಎದುರಾಳಿಗಳ ದಂಗುಬಡಿಸುವಂತೆ ಆಡಿ ಮೆರೆದಿದ್ದಾರೆ.

ಅವರ ಆಟವನ್ನು ಅಪ್ಪ–ಅಮ್ಮ ಕೂಡ ಕಣ್ತುಂಬಿಕೊಂಡರು. ಬೆಂಗಳೂರಿನಲ್ಲಿ ತಾತನ ಜೊತೆ ಕಳೆದ ದಿನಗಳೂ ನೆನಪಿಗೆ ಬಂದವು. ತಮ್ಮ ಮೆಚ್ಚಿನ ಸಚಿನ್ ತೆಂಡೂಲ್ಕರ್ ಇರುವ ದೇಶದಲ್ಲಿ ಚೆನ್ನಾಗಿ ಆಡುವುದು ಸ್ವರ್ಗ ಸುಖ ಎಂಬರ್ಥದ ಮಾತನ್ನು ಪಂದ್ಯದ ನಂತರ ರಚಿನ್ ಆಡಿದರು. ಅವರನ್ನೀಗ 'ಸೂಪರ್ ಸ್ಟಾರ್ ಇನ್ ಮೇಕಿಂಗ್' ಎಂದು ಅನೇಕರು ಹೊಗಳತೊಡಗಿದ್ದಾರೆ. ಅದಕ್ಕೆ ಇಂಗ್ಲೆಂಡ್ ವಿರುದ್ಧದ ಒಂದೇ ಒಂದು ಇನಿಂಗ್ಸ್ ಕಾರಣವಾಗಿಬಿಟ್ಟಿದೆ.

ಪ್ರತಿಕ್ರಿಯಿಸಿ: **feedback@sudha.co.in**